## ಪ್ರಾಥಮಿಕ ಶಿಕ್ಷಕ ಶಿಕ್ಷಣದಲ್ಲಿ ಡಿಪ್ಲೊಮಾ(ಡಿ.ಇಡಿ) ಎರಡು ವರ್ಷದ ಅವಧಿಯ ಡಿ.ಇಡಿ ಕೋರ್ಸ್

ಪ್ರಾಥಮಿಕ ಹಂತದ ಪಠ್ಯವಸ್ತುವಿನ ವಿವಿಧ ವಿಷಯಗಳಲ್ಲಿ ಪ್ರಶಿಕ್ಷಣಾರ್ಥಿ ಆಳವಾದ ಪರಿಣಿತಿಯು ಶಿಕ್ಷಕ ಶಿಕ್ಷಣಕ್ಕೆ ಅಡಿಪಾಯವಾಗಿರುವುದರಿಂದ ಈ ಪರಿಣಿತಿಯು ಶಿಕ್ಷಕ ಶಿಕ್ಷಣಕ್ಕೆ ಪೂರ್ವಭಾವಿ ಅರ್ಹತೆಯಾಗಿರಬೇಕಾದ ಅವಶ್ಯಕತೆಯಿದೆ.ಪ್ರಚಲಿತ ಭಾರತೀಯ ಸನ್ನಿವೇಶದಲ್ಲಿ ಸರ್ವರಿಗೂ ಶಿಕ್ಷಣ ಕೊಡುವ ಪ್ರಾಮಾಣಿಕ ಪ್ರಯತ್ನದಿಂದಾಗಿ, ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಉದ್ದೇಶದ ಮಾದರಿಗಳಲ್ಲಿ ಆಗಬೇಕಾದ ಬದಲಾವಣೆಯನ್ನು ಮನಗಂಡು, ಅನೇಕ ಬೆಳವಣಿಗೆಗಳಾಗಿದ್ದು, ಪ್ರಾಥಮಿಕ ಶಿಕ್ಷಕ ಶಿಕ್ಷಣವನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರು ರೂಪಿಸಿರುತ್ತಾರೆ.

ಪ್ರಾಥಮಿಕ ಶಿಕ್ಷಕ ಶಿಕ್ಷಣದಲ್ಲಿ ಡಿಪ್ಲೊಮಾ(ಡಿ.ಇಡಿ) 2002ರಎರಡು ವರ್ಷದ ಅವಧಿಯ ಡಿ.ಇಡಿ ಕೋರ್ಸ್ 2002ರಿಂದ ಜಾರಿಗೊಳಿಸಿದ್ದು,ತದನಂತರ ಪ್ರಾಥಮಿಕ ಶಿಕ್ಷಕ ಶಿಕ್ಷಣದಲ್ಲಿ ಡಿಪ್ಲೊಮಾ(ಡಿ.ಇಡಿ)–2012 ಪರಿಷ್ಕೃತ ಪಠ್ಯ ಕ್ರಮವನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರು ಜಾರಿಗೊಳಿಸಿರುತ್ತಾರೆ.

**ಉದ್ದೇಶ:–**

1. ಪ್ರಸ್ತುತ ಪಠ್ಯಕ್ರಮ ದಾಖಲೆಯು ಎರಡು ವರ್ಷ ಅವಧಿಯ ಡಿ.ಇಡಿ ಕಾರ್ಯಕ್ರಮದ ಪಠ್ಯಕ್ಷೇತ್ರಗಳು ಹಾಗೂ ಚಟುವಟಿಕೆಗಳ ರೂಪರೇಶಗಳನ್ನು ಒಳಗೊಂಡಿದೆ.
2. ಹೊರೆಯನ್ನು ಕಡಿಮೆ ಮಾಡಿ ಅರ್ಥ ಪೂರ್ಣ ಕಲಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶ ಈ ಪಠ್ಯಕ್ರಮದಲ್ಲಿದೆ.
3. ತಾತ್ವಿಕ ಅಂಶಗಳೊಂದಿಗೆ ಸೂಕ್ತ ಪ್ರಾಯೋಗಿಕ ಚಟುವಟಿಕೆಗಳಿಗೂ ಆಳವಾದ ಚರ್ಚೆಗಳಿಗೆ ಹಾಗೂ ರೂಪಣಾತ್ಮಕ ಮೌಲ್ಯಮಾಪನ ಪದ್ದತಿಗಳಿಗೆ ಒತ್ತು ನೀಡಲಾಗಿದೆ.
4. ಮಾನವೀಯತೆ ಮೌಲ್ಯವುಳ್ಳ ವೃತ್ತಿಪರ ಶಿಕ್ಷಕರನ್ನು ತಯಾರುಮಾಡುವುದು.
5. ತಾತ್ವಿಕತೆಯೊಂದಿಗೆ ಕೌಶಲಗಳ ವಿಕಾಸದ ಅವಕಾಶಗಳಿಗೆ ಒತ್ತು ನೀಡಿದೆ.
6. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳೆರಡರ ವಿಶಿಷ್ಠ ಜವಾಬ್ದಾರಿಗಳನ್ನು ಗ್ರಹಿಸುವ ಸಾಮರ್ಥ್ಯ ಅಪೇಕ್ಷಿಸಲಾಗಿದೆ.

➢ **ತರಬೇತಿಯ ಗುರಿ:–**

1. ಶಿಕ್ಷಣಕ್ಕೆ ಸಂಬಂಧಿಸಿದ ಮೂಲ ಪರಿಕಲ್ಪನೆಗಳು ವಿವಿಧ ಸವಾಲು, ಸಮಸ್ಯೆ ಸಂದರ್ಭಗಳನ್ನು ಪರಿಚಯಿಸುವುದು.
2. ಪ್ರಶಿಕ್ಷಣಾರ್ಥಿ ಶಿಕ್ಷಕರಿಗೆ ಶಿಕ್ಷಣದ ತತ್ವ ಮತ್ತು ಆಚರಣೆಗಳನ್ನು ಗ್ರಹಿಸುವಂತೆ ಮಾಡುವುದು.
3. ಪ್ರಥಮ ಭಾಷೆ ಮತ್ತು ಆಂಗ್ಲ ಭಾಷಾ ಸಂವಹನದಲ್ಲಿ ಪ್ರಭುತ್ವ ಉಂಟುಮಾಡುವುದು.
4. ಪ್ರಶಿಕ್ಷಣಾರ್ಥಿ ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪಡೆಯುವುದು.
5. ಆರೋಗ್ಯ ಮತ್ತು ದೈಹಿಕ ಶಿಕ್ಷಣದ ಸಮಗ್ರ ಗ್ರಹಿಕೆ. ಮಗುವಿನ ಸಮಗ್ರ ವಿಕಾಸಕ್ಕೆ.
6. ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆಗಳು,
7. ಎನ್.ಎಸ್.ಎಸ್ ಚಟುವಟಿಕೆಗಳು ಸಮುದಾಯದ ಜೀವನದಲ್ಲಿ ಅನುಭವ ಒದಗಿಸುತ್ತದೆ.

8. ಬೋಧನಾ ಅಭ್ಯಾಸ ಮತ್ತು ಇಂಟರ್ನ್‌ಶಿಪ್‌ಗಳುಪ್ರಶಿಕ್ಷಣಾರ್ಥಿ ಶಿಕ್ಷಕರನ್ನು ವೃತ್ತಿಪರರನ್ನಾಗಿಸುವುದು. ಮಾನವೀಯ ಚಿಂತನಶೀಲ ಪರಿಣಾಮಕಾರಿ ಶಿಕ್ಷಕರನ್ನಾಗಿಸುವ ಗುರಿಯನ್ನು ಹೊಂದಿದೆ.

➢ **ಪ್ರವೇಶಕ್ಕೆ ಅರ್ಹತೆ:**

i. ಭಾರತದ ಪ್ರಜೆಯಾಗಿರಬೇಕು. ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ವಾಣಿಜ್ಯ ವಿಭಾಗದ ಪ್ರಶಿಕ್ಷಣಾರ್ಥಿಗಳು ಯಾವುದಾದರೂ ಎರಡು ಶಾಲಾ ವಿಷಯಗಳನ್ನು ಅಭ್ಯಸಿಸಿದಲ್ಲಿ ಕೋರ್ಸಿಗೆ ಅರ್ಹರಾಗಿರುತ್ತಾರೆ.

ii. ಆದರೆ ಪ್ರೌಢ ಶಿಕ್ಷಣ ಹಂತದ ಇಲ್ಲವೇ ಪಿಯುಸಿ ಹಂತದ ವೃತ್ತಿಪರ ಡಿಪ್ಲೊಮಾ ಅಥವಾ ಇತರ ಯಾವುದೇ ವೃತ್ತಿಪರ ಕೋರ್ಸ್‌ಗಳಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ ಕೋರ್ಸ್‌ಗೆ ಅರ್ಹರಲ್ಲ.

iii. ಡಿ.ಇಡಿ ಕೋರ್ಸ್‌ಗೆ ಪ್ರವೇಶ ಪಡೆಯಲು ಪಿಯುಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಪಡೆದಿರಬೇಕು.

iv. ಪರಿಶಿಷ್ಠ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದವರು ಸಂಬಂಧಿಸಿದ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 45 ಅಂಕಗಳನ್ನು ಪಡೆದಿರಬೇಕು. ವರ್ಗ–1 ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದವರು ಕಾಲಕಾಲಕ್ಕೆ ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳನ್ನು ಅನ್ವಯಿಸಿಕೊಳ್ಳತಕ್ಕದ್ದು.

ರಾಜ್ಯದಲ್ಲಿ ಡಿ.ಇಡಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಎನ್.ಸಿ.ಟಿ.ಇ ಅನುಮತಿ ಮತ್ತು ಮಾನ್ಯತೆ ನೀಡುವ ಹಾಗೂ ದಾಖಲಾತಿ ಮಿತಿ ನಿಗಧಿಪಡಿಸುವ ಸಕ್ಷಮಪ್ರಾಧಿಕಾರವಾಗಿದೆ. ಜಿಲ್ಲಾ ಮಟ್ಟದಲ್ಲಿ ಡಯಟ್ ಪ್ರಾಂಶುಪಾಲರುಗಳು, ಡಿ.ಇಡಿ ಕಾಲೇಜುಗಳ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಕ್ಷಮ ಅಧಿಕಾರಿಗಳಾಗಿರುತ್ತಾರೆ. ಪಠ್ಯ ಪುಸ್ತಕ ರಚನೆ, ಪರಿಷ್ಕೃತ ಪಠ್ಯವಸ್ತು ತಯಾರಿಕೆ, ಪ್ರಶ್ನೆ ಪತ್ರಿಕೆ ನೀಲಿನಕಾಶೆ Scheme of Valuation, ಶೈಕ್ಷಣಿಕ ವೇಳಾಪಟ್ಟಿ ತಯಾರಿಕೆ, ಡಿ.ಇಡಿ ಸಂಸ್ಥೆಗಳ ಮಾಧ್ಯಮ, ಡಿ.ಇಡಿ ಸಂಸ್ಥೆಗಳನ್ನು ಅನುದಾನಕ್ಕೊಳಪಡಿಸುವ, ಅನುದಾನ ಬಿಡುಗಡೆ ಮಾಡುವ, ಡಿ.ಇಡಿ ಸಂಸ್ಥೆಗಳು ನಡೆಯುತ್ತಿರುವ ಬಗ್ಗೆ ಪರಿಶೀಲಿಸುವ, ತಪಾಸಣೆ, ಶಿಕ್ಷಕರಿಗೆ ತರಬೇತಿ, ಪುನಃಶ್ಚೇತನ ಕಾರ್ಯಗಾರ, ಡಯಟ್ ಪ್ರಾಂಶುಪಾಲರಿಗೆ ತರಬೇತಿ, ಆಂತರಿಕ ಬೋಧನಾ ಅಭ್ಯಾಸ, ಡಿ.ಇಡಿ ಪರೀಕ್ಷೆಗೆ ಸಂಬಂಧಿಸಿದಂತೆ, ಪಠ್ಯಪುಸ್ತಕ ತಯಾರಿಕೆ, ಗರಿಷ್ಠ ಮತ್ತು ಕನಿಷ್ಠ ಅಂಕಗಳ ನಿಗಧಿ, ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಬಗ್ಗೆ, ಪುನರ್‌ದಾಖಲಾತಿ, ವರ್ಗಾವಣೆ ಇತ್ಯಾದಿಗಳ ನಿಯಮಗಳನ್ನು ರೂಪಿಸುವ ಸಮಗ್ರ ಆಡಳಿತಾತ್ಮಕ ನಿರ್ವಹಣೆಯ ಸಕ್ಷಮ ಪ್ರಾಧಿಕಾರರಾಜ್ಯ ಶಿಕ್ಷಣ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರುರವರಾಗಿರುತ್ತಾರೆ.

**ದಾಖಲಾತಿ ಮಿತಿ ನಿಗಧಿ:–** ದಾಖಲಾತಿ ಮಿತಿಯನ್ನು ಎನ್.ಸಿ.ಟಿ.ಇ ನಿಗಧಿಪಡಿಸುತ್ತದೆ. ನಿಗಧಿಗೊಳಿಸಲಾಗಿರುವ ದಾಖಲಾತಿ ಮಿತಿಯಲ್ಲಿ ಸರ್ಕಾರಿ ಕೋಟಾದ ಮಿತಿ ಮತ್ತು ಆಡಳಿತ ಮಂಡಳಿ ಮಿತಿಯನ್ನು ಸರ್ಕಾರ ನಿಗಧಿಪಡಿಸುತ್ತದೆ.

ಎ. ಸಾಮಾನ್ಯ ವರ್ಗದ ಸಂಸ್ಥೆಗಳಲ್ಲಿ ಶೇ.50 ಸರ್ಕಾರಿ ಕೋಟಾ ಮತ್ತು ಶೇ.50 ಆಡಳಿತ ಮಂಡಳಿ ಕೋಟಾ.

**ಬಿ.** ಅಲ್ಪ ಸಂಖ್ಯಾತ ಸಂಸ್ಥೆಗಳಲ್ಲಿ(ಭಾಷೆ ಅಥವಾ ಮತೀಯ ಸಂಸ್ಥೆ) ಶೇ.25 ಸರ್ಕಾರಿ ಕೋಟಾ ಶೇಕಡ 75. ಆಡಳಿತ ಮಂಡಳಿ ಕೋಟಾ.ಅಲ್ಪ ಸಂಖ್ಯಾತ ಸಂಸ್ಥೆಯೆಂಬ ಬಗ್ಗೆ ಸರ್ಕಾರದಿಂದ ಘೋಷಣಾ ಪತ್ರ ಪಡೆದಿರುವ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುತ್ತದೆ.

ಸಿ. ಸರ್ಕಾರಿ ಕೋಟಾದ ಪ್ರಶಿಕ್ಷಣಾರ್ಥಿಗಳನ್ನು ಕೇಂದ್ರೀಕೃತ ದಾಖಲಾತಿ ಘಟಕ ಆಯ್ಕೆ ಮಾಡಿ, ಡಿ.ಇಡಿ ಸಂಸ್ಥೆಗಳಿಗೆ ಆಯ್ಕೆ ಪಟ್ಟಿ ಕಳುಹಿಸುತ್ತದೆ.ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ಪ್ರಶಿಕ್ಷಣಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಪ್ರಸ್ತುತ ಜಾರಿಯಲ್ಲಿರುವ ದಾಖಲಾತಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ.ದಾಖಲಾತಿಗಳನ್ನು ಮಾಡಿಕೊಳ್ಳುವಾಗ, ಮೀಸಲಾತಿ ನಿಯಮ, ಮಹಿಳಾ ಮೀಸಲಾತಿ ಮತ್ತಿತರೆ ಮೀಸಲಾತಿಗಳನ್ನು ಪರಿಶೀಲಿಸಿ ಅದರಂತೆ, ದಾಖಲಾತಿ ಮಾಡಿಕೊಳ್ಳಬೇಕಾಗಿದೆ.ಆಡಳಿತ ಮಂಡಳಿಯ ಕೋಟಾದ ದಾಖಲಾತಿ ಅನುಮೋದನೆಯನ್ನು ಡಯಟ್ ಪ್ರಾಂಶುಪಾಲರು, ಕೂಲಂಕುಶವಾಗಿ ಪರಿಶೀಲಿಸಿ, ಪೂರಕ ದಾಖಲೆಗಳ ಅಧಾರದ ಮೇಲೆ ಕ್ರಮಕೈಗೊಳ್ಳಬೇಕಾಗುತ್ತದೆ.

ಅಂದರೆ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣಪತ್ರ, ಅಂಗವಿಕಲತೆ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ನೀಡಿರುವ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳನ್ನು ಡಿ.ಇಡಿ ಪ್ರವೇಶ ನಿಯಮಾವಳಿಗಳಂತೆ, ಕರ್ನಾಟಕ ಪ್ರಶಿಕ್ಷಣಾರ್ಥಿಗಳು ದಾಖಲೆಗಳನ್ನು ಒದಗಿಸಬೇಕಾಗುತ್ತದೆ.ಕರ್ನಾಟಕೇತರ ಪ್ರಶಿಕ್ಷಣಾರ್ಥಿಗಳ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಮೇಲುಸಹಿ ಹೊಂದಿದ ದಾಖಲೆಗಳನ್ನು ಒದಗಿಸಬೇಕಾಗುತ್ತದೆ.ಡಿ.ಇಡಿ ಪ್ರವೇಶ ನಿಯಮಾವಳಿಗಳಂತೆ, ಆಡಳಿತ ಮಂಡಳಿಯ ಕೋಟಾವನ್ನು ಸಂಸ್ಥೆಗಳು ಭರ್ತಿ ಮಾಡಿ ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರು ಹೊರಡಿಸುವ ಆಯಾ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಂತೆ ಕ್ರಮವಹಿಸಬೇಕಾಗುತ್ತದೆ.ಮಾನ್ಯತೆ ಹೊಂದಿದ ಡಿ.ಇಡಿ ಸಂಸ್ಥೆಗಳು ಮಾಧ್ಯಮಕ್ಕೆ ಸರ್ಕಾರ, ಇಲಾಖೆಯ ಅನುಮತಿ ಪಡೆದಿರಬೇಕಾಗಿದೆ.ಪ್ರಶಿಕ್ಷಣಾರ್ಥಿಯು ವ್ಯಾಸಂಗ ಮಾಡಿರುವ ಮಾಧ್ಯಮದ ಬಗ್ಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿರುತ್ತದೆ.ಪ್ರಮಾಣ ಪತ್ರದಲ್ಲಿ ಪ್ರಶಿಕ್ಷಣಾರ್ಥಿಯು ವ್ಯಾಸಂಗ ಮಾಡಿದ ಮಾಧ್ಯಮದನ್ವಯ, ಪ್ರಥಮ ಮತ್ತು ದ್ವಿತೀಯ ಭಾಷೆಯನ್ನು ಆಯ್ದುಕೊಂಡು ವ್ಯಾಸಂಗ ಮಾಡಿರುವ ಪ್ರಶಿಕ್ಷಣಾರ್ಥಿಯನ್ನು ಅದೇ ಮಾಧ್ಯಮಕ್ಕೆ ದಾಖಲಿಸಿಕೊಳ್ಳಬೇಕಾಗಿದೆ.ಇದರಲ್ಲಿ ಯಾವುದೇ ವ್ಯತ್ಯಯವಾಗಬಾರದು.

ಪ್ರಶಿಕ್ಷಣಾರ್ಥಿಯು ಪ್ರಥಮ ಡಿ.ಇಡಿಯಲ್ಲಿ ಯಾವ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಾನೋ ಅದೇ ಮಾಧ್ಯಮದಲ್ಲಿ ದ್ವಿತೀಯ ಡಿ.ಇಡಿಯನ್ನು ವ್ಯಾಸಂಗ ಮಾಡಬೇಕಾಗುತ್ತದೆ.

**ಶೈಕ್ಷಣಿಕ ವರ್ಷದ ವೇಳಾಪಟ್ಟಿ:**–ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರು ಶೈಕ್ಷಣಿಕ ವರ್ಷದ ವೇಳಾಪಟ್ಟಿಯನ್ನು ಪ್ರಕಟಿಸುತ್ತಾರೆ. ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಶೈಕ್ಷಣಿಕ ವೇಳಾಪಟ್ಟಿ ಸಾಮಾನ್ಯವಾಗಿ ಜುಲೈ ತಿಂಗಳ ಕೊನೆಯವಾರದಲ್ಲಿ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ತರಗತಿಗಳು ಪ್ರಾರಂಭವಾಗುತ್ತದೆ.ಜೂನ್ ಎರಡನೇ ವಾರಕ್ಕೆ ವಾರ್ಷಿಕ ಅವಧಿ ಮುಗಿಯುತ್ತದೆ. ಒಟ್ಟು 220 ಕಾರ್ಯ ದಿನಗಳಾಗಿರುತ್ತದೆ.

- **ಸಂಸ್ಥೆ ಸಂಕೇತ ಮತ್ತು ನೋಂದಣಿ ಶುಲ್ಕ:–** ಸರ್ಕಾರ ಅಥವಾ ಎನ್.ಸಿ.ಟಿ.ಇ ಯಿಂದ ಅನುಮತಿ ಮತ್ತು ಮಾನ್ಯತೆ ಪಡೆದ ಡಿ.ಇಡಿ ಶಿಕ್ಷಣ ಸಂಸ್ಥೆಗಳು ಆಯಾ ಡಯಟ್ ಪ್ರಾಂಶುಪಾಲರಿಗೆ, ಸಂಸ್ಥೆಯನ್ನು ಪ್ರಾರಂಭಿಸಿರುವ ಬಗ್ಗೆ ಮಾಹಿತಿ ನೀಡಿ ನಿಗಧಿತ ನಮೂನೆಯಲ್ಲಿ, ಸಂಸ್ಥೆಯ ಸಂಕೇತ ಸಂಖ್ಯೆಯನ್ನು ಮಂಡಳಿಯಿಂದ ಪಡೆಯಬೇಕಾಗಿರುತ್ತದೆ. ಇದಕ್ಕಾಗಿ ಪ್ರಸ್ತಾವನೆಯನ್ನು ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರ ಮುಖಾಂತರ ಸಲ್ಲಿಸಬೇಕಾಗಿರುತ್ತದೆ. ಮಂಡಳಿಯು ಹೊಸದಾಗಿ ಶಾಲಾ ಸಂಕೇತ ಪಡೆಯಲು ರೂ.1000/– ಶುಲ್ಕ ನಿಗಧಿಪಡಿಸಿದೆ. ಅದೇ ರೀತಿ ಪ್ರತಿ ವರ್ಷವು ಮಂಡಳಿಯು ಪರೀಕ್ಷಾ ಅಧಿಸೂಚನೆಯನ್ನು ಪ್ರಕಟಿಸುವ ಸಮಯದಲ್ಲಿ, ಪ್ರತಿಯೊಂದು ಸಂಸ್ಥೆಯು ಪರೀಕ್ಷಾ ಶುಲ್ಕದೊಂದಿಗೆ ನವೀಕರಣ ಶುಲ್ಕ ರೂ.1000/– ಕಡ್ಡಾಯವಾಗಿ ಪಾವತಿಸಬೇಕಾಗಿದೆ.
- **ಪರೀಕ್ಷೆಗೆ ತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳ ವಿವರ**
  **ಹೊಸ ಪ್ರಶಿಕ್ಷಣಾರ್ಥಿಗಳು:–** ಪ್ರಥಮ ಮತ್ತು ದ್ವಿತಿಯ ಡಿ.ಇಡಿ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳನ್ನು (RF)ಎಂದು ನಮೂದಿಸಲಾಗಿದೆ.

  **ಪುನರಾವರ್ತಿತ** ಪ್ರಶಿಕ್ಷಣಾರ್ಥಿಗಳು:– ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಅನುತ್ತೀರ್ಣ ಪ್ರಶಿಕ್ಷಣಾರ್ಥಿಗಳು ಪುನಃ ಪರೀಕ್ಷೆ ತೆಗೆದುಕೊಂಡಾಗ, ಪುನರಾವರ್ತಿತ ಪ್ರಶಿಕ್ಷಣಾರ್ಥಿಗಳೆಂದು(RR) ಎಂದು ನಮೂದಿಸಲಾಗಿದೆ.
- **ಪ್ರಶಿಕ್ಷಣಾರ್ಥಿಗಳಿಗೆ ಇರಬೇಕಾದ ಕನಿಷ್ಠ ಹಾಜರಾತಿ:–** ಶೈಕ್ಷಣಿಕ ವರ್ಷದ ಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇ.80ರಷ್ಟು ಹಾಜರಾತಿ ಇಲ್ಲದ ಪ್ರಶಿಕ್ಷಣಾರ್ಥಿ ಶಿಕ್ಷಕರು ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುವುದಿಲ್ಲ. ಸಂಸ್ಥೆಯ ಮುಖ್ಯಸ್ಥರು(ವಿಶೇಷ ಸಂದರ್ಭಗಳಲ್ಲಿ) ಶೇ.10 ರಷ್ಟು ವಿನಾಯಿತಿ ನೀಡಬಹುದು. ಪರೀಕ್ಷಾ ಮಂಡಳಿಯ ಅಧ್ಯಕ್ಷರು ಶೇ.15ರವರೆಗೆ ಗೈರು ಹಾಜರಿಯನ್ನು ವಿನಾಯಿತಿ ನೀಡಬಹುದು.
- **ಪುನರ್ ದಾಖಲಾತಿಬಗ್ಗೆ:**–ಪ್ರಥಮ ಡಿ.ಇಡಿ ವ್ಯಾಸಂಗ ಮಾಡಿ, ಸ್ವಾಭಾವಿಕ ಬೆಳವಣಿಗೆಯಂತೆ, ದ್ವಿತೀಯ ಡಿ.ಇಡಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮುಂದುವರಿಸಬೇಕಾಗಿದೆ. ಅನೇಕ ಕಾರಣಗಳಿಂದ ಈ ರೀತಿ ಮುಂದುವರಿಸಲು ಪ್ರಶಿಕ್ಷಣಾರ್ಥಿಗೆ ಅನಾನುಕೂಲವಾಗಿರುವ ಸಂದರ್ಭದಲ್ಲಿ, ಪ್ರಶಿಕ್ಷಣಾರ್ಥಿಯು ಪುನಃ ದ್ವಿತೀಯ ಡಿ.ಇಡಿ ವ್ಯಾಸಂಗ ಮುಂದುವರಿಸಬೇಕಾದಲ್ಲಿ, ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು ಜಿಲ್ಲೆಯೊಳಗೆ ಪುನರ್ ದಾಖಲಾತಿಗೆ ಅನುಮತಿ ನೀಡುವ ಅಧಿಕಾರ ಹೊಂದಿರುತ್ತಾರೆ. ಅಂತರ್ ಜಿಲ್ಲೆ ಪ್ರಕರಣಗಳ ಬಗ್ಗೆ ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಅನುಮತಿ ಮೇರೆಗೆ ಡಯಟ್ ಪ್ರಾಂಶುಪಾಲರು, ಕ್ರಮಕೈಗೊಳ್ಳಬೇಕಾಗಿದೆ.
- ಈ ಕೆಳಕಂಡ ನಿಬಂಧನೆಗಳನ್ನು ಪುನರ್ ದಾಖಲಾತಿಗೆ ಪಾಲಿಸಿರಬೇಕು.
  - ಪ್ರಶಿಕ್ಷಣಾರ್ಥಿಯು ದ್ವಿತೀಯ ಡಿ.ಇಡಿ ಪರೀಕ್ಷೆಯನ್ನು ಪೂರ್ಣಗೊಳಿಸಬೇಕಾದ ವರ್ಷದಿಂದ, ಮೂರು ವರ್ಷದ ಅವಧಿಯೊಳಗಿರಬೇಕು.
  - ಪುನರ್ದಾಖಲಾತಿ ಕೋರಿರುವ ಕಾಲೇಜಿಗೆ ನಿಗಧಿಪಡಿಸಲಾಗಿರುವ ದಾಖಲಾತಿ ಮಿತಿಯೊಳಗೆ ಆಯಾ ಮಾಧ್ಯಮವಿರುವ ಸಂಸ್ಥೆಗಳಿಗೆ ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡಬೇಕಾಗಿದೆ.

- **ವರ್ಗಾವಣೆ:–** ಪ್ರಥಮ ಡಿ.ಇಡಿ ತರಬೇತಿಯನ್ನು ಒಂದು ಸಂಸ್ಥೆಯಲ್ಲಿ ಪಡೆದು ಪ್ರಶಿಕ್ಷಣಾರ್ಥಿಯು ಇಚ್ಛಿಸಿದಾಗ ಬೇರೊಂದು ಸಂಸ್ಥೆಗೆ ವರ್ಗಾವಣೆ ಬಯಸಿದಲ್ಲಿ, ಜಿಲ್ಲೆಯೊಳಗಿನ ವರ್ಗಾವಣೆಯನ್ನು ಆಯಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಮಾಡಲು ಅವಕಾಶವಿದೆ. ಅಂತರ್ ಜಿಲ್ಲಾ ವರ್ಗಾವಣೆಯನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಅನುಮತಿ ಮೇರೆಗೆ ವರ್ಗಾವಣೆ ಮಾಡಲು ಅವಕಾಶವಿದೆ.
- ಈ ಕೆಳಕಂಡ ನಿಬಂಧನೆಗಳನ್ನು ವರ್ಗಾವಣೆಗೆ ಪಾಲಿಸಿರಬೇಕು.

- ವರ್ಗಾವಣೆ ಕೋರಿರುವ ಕಾಲೇಜಿಗೆ ನಿಗಧಿಪಡಿಸಲಾಗಿರುವ ದಾಖಲಾತಿ ಮಿತಿಯೊಳಗೆ ಆಯಾ ಮಾಧ್ಯಮವಿರುವ ಸಂಸ್ಥೆಗಳಿಗೆ ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡಬೇಕಾಗಿದೆ.
- ಪ್ರಶಿಕ್ಷಣಾರ್ಥಿಯು ಪ್ರಥಮ ಡಿ.ಇಡಿಯನ್ನು ವ್ಯಾಸಂಗ ಮಾಡಿರುವ ಮಾಧ್ಯಮದಲ್ಲಿಯೇ ದ್ವಿತೀಯ ಡಿ.ಇಡಿ ಮಾಧ್ಯಮವನ್ನು ವ್ಯಾಸಂಗ ಮಾಡಬೇಕು. ಅಂದರೆ ಪ್ರಶಿಕ್ಷಣಾರ್ಥಿಯು ವರ್ಗಾವಣೆಗೊಳ್ಳುವ ಸಂಸ್ಥೆಯ ಮಾಧ್ಯಮವು ಪ್ರಶಿಕ್ಷಣಾರ್ಥಿ ವ್ಯಾಸಂಗ ಮಾಡಿದ ಪ್ರಥಮ ಡಿ.ಇಡಿ ಮಾಧ್ಯಮ ಆಗಿರುವ ಸಂಸ್ಥೆಯೇ ಆಗಿರಬೇಕು.

- **ಶಿಕ್ಷಕ ತರಬೇತಿ ಸಂಸ್ಥೆಗಳ ಮಾಧ್ಯಮ ನಿಗಧಿ ಮತ್ತು ವಿಳಾಸಗಳ ಬಗ್ಗೆ:–**
  ಸರ್ಕಾರದಿಂದ ವಿತರಿಸಲಾಗಿರುವ ನಿರಾಪೇಕ್ಷಣಾ ಪತ್ರ/ಎನ್.ಸಿ.ಟಿ.ಇ ಪ್ರಾಧಿಕಾರದ ಮಾನ್ಯತೆ ಆದೇಶದಲ್ಲಿ ಸಂಸ್ಥೆಯ ಮಾಧ್ಯಮವನ್ನು ನಮೂದಿಸಲಾಗಿರುವ ನಿಗಧಿಯಾದ ಮಾಧ್ಯಮವನ್ನು ಅಳವಡಿಸುವುದು ಕಡ್ಡಾಯವಾಗಿದೆ.ಮಾಧ್ಯಮ ಬದಲಾವಣೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶವಿಲ್ಲದೆ ಅವಕಾಶವಿಲ್ಲ. ಎಲ್ಲಾ ಡಯಟ್ ಪ್ರಾಂಶುಪಾಲರುಗಳು ಈ ಆದೇಶವನ್ನು ಸಂಸ್ಥೆಗಳು ಪಾಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

  ಎನ್.ಸಿ.ಟಿ.ಇ ಪ್ರಾಧಿಕಾರದ ಮಾನ್ಯತೆ ಆದೇಶದಲ್ಲಿರುವ ಸ್ಥಳ ಮತ್ತು ವಿಳಾಸದಲ್ಲಿ ಡಿ.ಇಡಿ ಸಂಸ್ಥೆಯನ್ನು ನಡೆಸಬೇಕು.ಎನ್.ಸಿ.ಟಿ.ಇ ಪ್ರಾಧಿಕಾರದ ಅನುಮತಿ ಇಲ್ಲದೇ ವಿಳಾಸ ಬದಲಾವಣೆ ಮಾಡುವಂತಿಲ್ಲ.
- **ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪರೀಕ್ಷೆಗಳ ವೇಳಾಪಟ್ಟಿ ಬಗ್ಗೆ:–** ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪರೀಕ್ಷೆಗಳನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ಪ್ರಾಧಿಕಾರವು ನಿಗಧಿಪಡಿಸುವ ಶೈಕ್ಷಣಿಕ ವೇಳಾಪಟ್ಟಿಯಂತೆ, ಪರೀಕ್ಷೆಗಳನ್ನು ಮಂಡಳಿ ನಡೆಸಲಾಗುತ್ತದೆ. ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ನಡೆಸಲಾಗುತ್ತದೆ. ಮುಖ್ಯ ಪರೀಕ್ಷೆಯು ಜೂನ್/ಜುಲೈ ಮಾಹೆಯಲ್ಲಿ ಹೊಸ ಪ್ರಶಿಕ್ಷಣಾರ್ಥಿಗಳು ಮತ್ತು ಪುನರಾವರ್ತಿತ ಪ್ರಶಿಕ್ಷಣಾರ್ಥಿಗಳಿಗೆ ನಡೆಸಲಾಗುತ್ತದೆ. ಡಿಸೆಂಬರ್/ಜನವರಿ ಮಾಹೆಯಲ್ಲಿ ಅನುತ್ತೀರ್ಣ ಪ್ರಶಿಕ್ಷಣಾರ್ಥಿಗಳಿಗೆ ಪೂರಕ ಪರೀಕ್ಷೆಯನ್ನು ನಡೆಸಲಾಗುತ್ತದೆ. ಆಂತರಿಕ ಮತ್ತು ಬೋಧನಾ ಅಭ್ಯಾಸಗಳಲ್ಲಿ ಅನುತ್ತೀರ್ಣ ಹೊಂದಿದ ಪ್ರಶಿಕ್ಷಣಾರ್ಥಿಗಳಿಗೆ ಮುಖ್ಯ ಪರೀಕ್ಷೆಯಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- **ಪರೀಕ್ಷಾ ಶುಲ್ಕ:–** ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಮಂಡಳಿ ನಿಗಧಿಪಡಿಸಿದೆ.

1. ಪ್ರಥಮ ಡಿ.ಇಡಿ ಹೊಸ ಪ್ರಶಿಕ್ಷಣಾರ್ಥಿಗಳಿಗೆ ರೂ.700–00+ಲ್ಯಾಮಿನೇಷನ್ ಶುಲ್ಕ ರೂ.25–00 ಒಟ್ಟು ರೂ.725–00
2. ದ್ವಿತೀಯ ಡಿ.ಇಡಿ ಹೊಸ ಪ್ರಶಿಕ್ಷಣಾರ್ಥಿಗಳಿಗೆ ರೂ.700–00+ಲ್ಯಾಮಿನೇಷನ್ ಶುಲ್ಕ ರೂ.50–00ಒಟ್ಟು ರೂ.750–00
3. ಪುನರಾವರ್ತಿತ ಪ್ರಶಿಕ್ಷಣಾರ್ಥಿಗಳಿಗೆ –ಅ) ಒಂದು ವಿಷಯಕ್ಕೆ ರೂ.200–00.
   ಆ) ಎರಡು ವಿಷಯಕ್ಕೆ ರೂ.400–00.
   ಇ) ಎರಡಕ್ಕಿಂತ ಹೆಚ್ಚು ವಿಷಯಗಳಿಗೆ ರೂ.700–00.

- **ಪರೀಕ್ಷಾ ಶುಲ್ಕ ವಿನಾಯಿತಿ:–** ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ಮತ್ತು ಪ್ರವರ್ಗ–1ರ ಪ್ರಶಿಕ್ಷಣಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇದೆ. ಆದರೆ ಲ್ಯಾಮಿನೇಷನ್ ಶುಲ್ಕ ಕಡ್ಡಾಯ. ಪರೀಕ್ಷಾ ಶುಲ್ಕ ವಿನಾಯಿತಿ ಇರುವ ಪ್ರಶಿಕ್ಷಣಾರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದು ಮಂಡಳಿಗೆ ಮರುಪಾವತಿಸಬೇಕಾಗಿದೆ.
- **ಪ್ರಥಮ ಡಿ.ಇಡಿ ನಾಮಿನಲ್‌ರೋಲ್:–**
  - ಮಂಡಳಿಯಿಂದ ಕಳುಹಿಸುವ ನಮೂನೆಯಲ್ಲಿ ಪ್ರಾಶಿಕ್ಷಣಾರ್ಥಿಯಹೆಸರು, ಪ್ರಶಿಕ್ಷಣಾರ್ಥಿಯ ತಂದೆಯ ಹೆಸರು ಮತ್ತು ಪ್ರಶಿಕ್ಷಣಾರ್ಥಿಯ ತಾಯಿಯ ಹೆಸರನ್ನು ಹಾಗೂ ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ, ಮಾತ್ರ ಪರಿಗಣಿಸಲಾಗುತ್ತದೆ.
  - ಪ್ರಶಿಕ್ಷಣಾರ್ಥಿಯು ಆಯ್ಕೆ ಮಾಡಿರುವ ಮಾಧ್ಯಮ ವಿಷಯಗಳು, ಶುಲ್ಕದ ವಿವರ ಇತ್ಯಾದಿಗಳನ್ನು ನಮೂದಿಸಬೇಕು. ಅಲ್ಲದೇ ಸರ್ಕಾರಿ ಕೋಟಾ, ಆಡಳಿತ ಮಂಡಳಿ ಕೋಟಾ ಮತ್ತು ಸರ್ಕಾರಿ ಉಳಿಕೆ ಕೋಟಾದಲ್ಲಿ ಆಡಳಿತ ಮಂಡಳಿಯಿಂದ ಭರ್ತಿ ಮಾಡಿದಲ್ಲಿ ಅಂತಹವುಗಳನ್ನು ಕೇಂದ್ರೀಕೃತ ದಾಖಲಾತಿ ಘಟಕದ ಅನುಮತಿ ಮೇರೆಗೆ ಸಂಸ್ಥೆಯವರು ಭರ್ತಿ ಮಾಡಿ ಡಯಟ್ ಪ್ರಾಂಶುಪಾಲರಿಂದ ಅನುಮೋದನೆಯನ್ನು ಪಡೆದಿರುವ ಸಂಖ್ಯೆಯನ್ನು ನಾಮಿನಲ್‌ರೋಲ್‌ನಲ್ಲಿ ನಮೂದಿಸಬೇಕು. ಆಯಾ ಕೋಟಾದ ಕ್ರಮ ಸಂಖ್ಯೆಯನ್ನು ನಮೂದಿಸಬೇಕಾಗಿರುತ್ತದೆ.
  - ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರ ಸಹಿ ಮತ್ತು ಮೊಹರುನೊಂದಿಗೆ ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರಿಗೆ ಸಲ್ಲಿಸಬೇಕು. ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು ಅವುಗಳನ್ನು ಪರಿಶೀಲಿಸಿ ಸರಿ ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮೇಲು ಸಹಿ ಮಾಡಿರಬೇಕು.
  - ಪ್ರಥಮ ಡಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಓ.ಎಂ.ಆರ್ ನೀಡಲಾಗುತ್ತಿದ್ದು, ಸಂಬಂಧಿಸಿದ ಓ.ಎಂ.ಆರ್‌ನಲ್ಲಿ ಪ್ರಶಿಕ್ಷಣಾರ್ಥಿಯು ಎಲ್ಲಾ ವಿವರಗಳನ್ನು ಭರ್ತಿ ಮಾಡಬೇಕು. ಪ್ರಶಿಕ್ಷಣಾರ್ಥಿಯು ನಮೂದಿಸಿರುವ ಮಾಹಿತಿಯು ಸರಿಯಿದೆಯೇ? ಎಂಬುದರ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ಪರಿಶೀಲಿಸಬೇಕು.
  - ನೋಂದಣಿ ಸಂಖ್ಯೆ, ಪ್ರಥಮ ಮತ್ತು ದ್ವಿತೀಯ ಡಿ.ಇಡಿಗೆ Unique ಆಗಿ ನೀಡಲಾಗುತ್ತಿದೆ. ದ್ವಿತೀಯ ಡಿ.ಇಡಿಗೆ ಮಂಡಳಿಯಿಂದ ಚೆಕ್‌ಲಿಸ್ಟ್ ನಾಮಿನಲ್‌ರೋಲ್, ಪ್ರೀಪ್ರಿಂಟೆಡ್ ಕಳುಹಿಸಲಾಗುತ್ತಿದೆ. ಅದರಂತೆ, ಸಂಸ್ಥೆಯು ಮಾಹಿತಿಯನ್ನು ಭರ್ತಿ ಮಾಡಬೇಕಾಗಿದೆ.

- **ಎಂ.ಎಸ್.ಎ(Marks Statement Cum-Application) (ಪರೀಕ್ಷಾ ಅರ್ಜಿ):-**

1. ಅನುತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪ್ರಶಿಕ್ಷಣಾರ್ಥಿಗಳ ಎಂ.ಎಸ್.ಎಗಳನ್ನು ನೀಡಲಾಗುತ್ತದೆ. ಎಂ.ಎಸ್.ಎಯಲ್ಲಿ **ಫಲಿತಾಂಶ ಪಟ್ಟಿಯಲ್ಲಿರುವಂತೆ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ದೃಢೀಕರಿಸಿ ಕಳುಹಿಸಬೇಕು.**
2. ಮುದ್ರಿತ ಎಂ.ಎಸ್.ಎಯಲ್ಲಿ ಪ್ರಶಿಕ್ಷಣಾರ್ಥಿ ಭಾವಚಿತ್ರ ಅಂಟಿಸಿ ನಿಗಧಿತ ಅಂಕಣದಲ್ಲಿ ಪ್ರಶಿಕ್ಷಣಾರ್ಥಿಯಿಂದ ಸಹಿ ಪಡೆದು ದೃಢೀಕರಿಸಿ ಮಂಡಳಿಗೆ ಸಲ್ಲಿಸುವುದು.
3. ಯಾವುದೇ ಪ್ರಶಿಕ್ಷಣಾರ್ಥಿಯ ಎಂ.ಎಸ್.ಎ ಲಭ್ಯವಿಲ್ಲದಿದ್ದಲ್ಲಿ, ಮುದ್ರಿತ ಎಂ.ಎಸ್.ಎಯನ್ನು ಮಂಡಳಿಯಿಂದ ಪಡೆಯತಕ್ಕದ್ದು, ಇದಕ್ಕಾಗಿ ರೂ.50/- ಶುಲ್ಕ ನಿಗಧಿಪಡಿಸಿದೆ.

- **ಚೆಕ್‌ಲಿಸ್ಟ್ ನಾಮಿನಲ್‌ರೋಲ್:-** ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪ್ರಶಿಕ್ಷಣಾರ್ಥಿಗಳ ಶುಲ್ಕ ಪಾವತಿಯಾದ ನಂತರ ಹಾಗೂ ಓ.ಎಂ.ಆರ್ ಸ್ಕ್ಯಾನ್ ಡೇಟಾ ಮಾಹಿತಿಯನ್ನು ಹಾಗೂ ಪುನರಾವರ್ತಿತ ಪ್ರಶಿಕ್ಷಣಾರ್ಥಿಗಳ ಎಂ.ಎಸ್.ಎ Extract ಮಾಹಿತಿಯನ್ನು ಚೆಕ್‌ಲಿಸ್ಟ್ ನಾಮಿನಲ್‌ರೋಲ್ ತಯಾರಿಸಿ, ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಇವುಗಳಲ್ಲಿನ ಲೋಪದೋಷಗಳನ್ನು ತಿದ್ದುಪಡಿಮಾಡಿ ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಮಂಡಳಿಗೆ ಸಲ್ಲಿಸಬೇಕಾಗಿದೆ.
- **ಪರೀಕ್ಷಾ ಕೇಂದ್ರಗಳ ಬಗ್ಗೆ:-** ಸಾಮಾನ್ಯವಾಗಿ ಪ್ರಶಿಕ್ಷಣಾರ್ಥಿಗಳ ಸಂಖ್ಯೆಗನುಗುಣವಾಗಿ ಜಿಲ್ಲಾ ಹಂತದಲ್ಲಿ ಮತ್ತು ತಾಲ್ಲೂಕು ಹಂತದಲ್ಲಿ ಡಿ.ಇಡಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಡಯಟ್ ಪ್ರಾಂಶುಪಾಲರು ಆಯ್ಕೆ ಮಾಡಿ ಸೂಚಿಸುವ ಪರೀಕ್ಷಾ ಕೇಂದ್ರಗಳನ್ನು ಮಂಡಳಿ ನಿರ್ಧರಿಸುತ್ತದೆ.
- **ನೋಡಲ್ ಅಧಿಕಾರಿಗಳ ನೇಮಕ:-** ಜಿಲ್ಲಾ ಹಂತದಲ್ಲಿ ಆಯಾ ಡಯಟ್ ಪ್ರಾಂಶುಪಾಲರು ಸೂಚಿಸಿ ನೇಮಿಸುವ ಅಧಿಕಾರಿಯನ್ನು ಆಯಾ ಪರೀಕ್ಷಾ ಕಾರ್ಯದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗುವುದು. ಪರೀಕ್ಷಾ ನಾಮಿನಲ್‌ರೋಲ್ ಸಲ್ಲಿಸುವುದರಿಂದ ಮೊದಲುಗೊಂಡು, ಅಂಕಪಟ್ಟಿ ವಿತರಣೆಯವರೆಗೂ ವಿವಿಧ ಹಂತಗಳ ಮಾಹಿತಿಯನ್ನು ನೀಡುವ ಮತ್ತು ಉಸ್ತುವಾರಿಯನ್ನು ನೋಡಲ್ ಅಧಿಕಾರಿಗಳಿಗೆ ವಹಿಸಿರುತ್ತಾರೆ. ಡಯಟ್ ಪ್ರಾಂಶುಪಾಲರು ನೋಡಲ್ ಅಧಿಕಾರಿಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.
- **ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರು ಮತ್ತು ಅಭಿರಕ್ಷಕರ ನೇಮಕ:-** ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೂ ಡಯಟ್ ಪ್ರಾಂಶುಪಾಲರಿಂದ ಸೂಚಿಸುವ ಮುಖ್ಯ ಅಧೀಕ್ಷಕರು ಹಾಗೂ ಅಭಿರಕ್ಷಕರನ್ನು ಮಂಡಳಿ ನೇಮಿಸುತ್ತದೆ. ಮುಖ್ಯ ಅಧೀಕ್ಷಕರು ತಮ್ಮ ಪರೀಕ್ಷಾ ಕೇಂದ್ರದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ಬಗ್ಗೆ ಮುಖ್ಯ ಅಧೀಕ್ಷಕರು, ಅಭಿರಕ್ಷಕರು ನಿರ್ವಹಿಸಬೇಕಾಗಿರುವ ಕಾರ್ಯದ ಸಂಪೂರ್ಣ ವಿವರಗಳನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸಲಾಗುವುದು.
- **ಪರೀಕ್ಷಾ ವೇಳಾಪಟ್ಟಿ:-** ಪ್ರಥಮ ಮತ್ತು ದ್ವಿತೀಯ ಡಿ.ಇಡಿಯ ಬಾಹ್ಯ ಪರೀಕ್ಷೆಗಳ, ಹೊಸ ಪಠ್ಯವಸ್ತು ಮತ್ತು ಹಳೇ ಪಠ್ಯವಸ್ತುವಿನನ್ವಯ ಪರೀಕ್ಷಾ ವೇಳಾಪಟ್ಟಿಯನ್ನು ಮತ್ತು ಅಧಿಸೂಚನೆಯನ್ನು ಅಂತರ್‌ಜಾಲದಲ್ಲಿ ಪ್ರಕಟಿಸಲಾಗುವುದು.
- **ಪ್ರವೇಶ ಪತ್ರ:-** ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಸಂಸ್ಥೆಗಳಿಂದ ಬಂದ ನಂತರ, ಅವುಗಳಲ್ಲಿನ ತಿದ್ದುಪಡಿಗಳನ್ನು ಮಂಡಳಿ ಅಳವಡಿಸಿ ಪ್ರಶಿಕ್ಷಣಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಮುದ್ರಿಸಿ ನೀಡಲಾಗುತ್ತದೆ. ಪರೀಕ್ಷಾ ವೇಳಾಪಟ್ಟಿ ಸಲ್ಲಿಸಲಾಗುತ್ತದೆ

ಹಾಗೂ ಪ್ರವೇಶ ಪತ್ರಗಳನ್ನು ಕಳುಹಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲಾಗುತ್ತದೆ. ಪ್ರವೇಶ ಪತ್ರಗಳಲ್ಲಿ ತಿದ್ದುಪಡಿಗಳಿದ್ದಲ್ಲಿ, ಪ್ರವೇಶ ಪತ್ರದ ಛಾಯಾ ಪ್ರತಿಯ ಮೇಲೆ ಕೆಂಪು ಶಾಹಿಯಲ್ಲಿ ತಿದ್ದುಪಡಿ ಮಾಡಿ, ಒಂದು ವೇಳೆ ಮಾಧ್ಯಮ ಬದಲಾವಣೆ ಇದ್ದಲ್ಲಿ, ವಿಷಯಗಳ ಬದಲಾವಣೆಯಿದ್ದಲ್ಲಿ, ಪ್ರಶಿಕ್ಷಣಾರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ ಮತ್ತು ಭಾವಚಿತ್ರ ಇತ್ಯಾದಿಗಳ ವ್ಯತ್ಯಾಸವಿದ್ದಲ್ಲಿ ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ.

- **ವಿಕಲಚೇತನ ಪ್ರಶಿಕ್ಷಣಾರ್ಥಿಗಳಿಗೆ, ಬರಹಗಾರರ ಸೌಲಭ್ಯ ಮತ್ತು ಹೆಚ್ಚಿನ ಕಾಲಾವಕಾಶ:–** ಸರ್ಕಾರದ ಪತ್ರ ಸಂಖ್ಯೆ.ಇಡಿ.98.ಇಎಸ್‌ಡಬ್ಲ್ಯೂ.2009 ದಿನಾಂಕ:10–6–2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನ ಪ್ರಶಿಕ್ಷಣಾರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರನ್ನು ನೇಮಿಸುವ ಬಗ್ಗೆ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.
- **ಪರೀಕ್ಷಾ ಕೇಂದ್ರವಾರು ನಾಮಪಟ್ಟಿ ತಯಾರಿಕೆ:–** ಆಯಾ ಪರೀಕ್ಷಾ ಕೇಂದ್ರವಾರು ತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳ ಹೆಸರು ಮತ್ತಿತರೆ ವಿವರಗಳನ್ನೊಳಗೊಂಡ ಭಾವಚಿತ್ರವಿರುವ ಸಿ.ಎನ್.ಆರ್‌ಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಪ್ರವೇಶ ಪತ್ರದಲ್ಲಿರುವ ಭಾವಚಿತ್ರವು, ಸಿ.ಎನ್.ಆರ್‌ನಲ್ಲಿರುವ ಭಾವಚಿತ್ರ ಮತ್ತು ಪ್ರಾಶಿಕ್ಷಣಾರ್ಥಿಯ ಸಹಿಯನ್ನು ಒಂದಕ್ಕೊಂದು ತಾಳೆ ಮಾಡಿ, ಪ್ರವೇಶ ಪತ್ರವನ್ನು ಹಾಜರುಪಡಿಸುವ ಪ್ರಾಶಿಕ್ಷಣಾರ್ಥಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಬೇಕಾಗಿದೆ.
- **ಪರೀಕ್ಷಾ ಕೇಂದ್ರಗಳಲ್ಲಿ ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳ ನೇಮಕ:–** ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು, ಪರೀಕ್ಷೆಯ ಸುವ್ಯವಸ್ಥಿತವಾಗಿ ನಡೆಯಲು ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಲು ಯಾವುದೇ ನಕಲು ಹಾಗೂ ಬದಲಿ ಪ್ರಶಿಕ್ಷಣಾರ್ಥಿಗಳು ಪರೀಕ್ಷೆಗೆ ಹಾಜರಾಗದಿರುವಂತೆ, ಎಚ್ಚರವಹಿಸಲು ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳಗಳನ್ನು ನೇಮಿಸಿರುತ್ತಾರೆ.
- **ಪರೀಕ್ಷಾ ಅವ್ಯವಹಾರ:–** ಪರೀಕ್ಷಾ ಅಕ್ರಮಗಳಿಗೆ, ಪರೀಕ್ಷೆಗೆ ಮೊದಲು ತಪ್ಪು ಮಾಹಿತಿ ನೀಡುವ ಸಂಸ್ಥೆಯ ಪ್ರಾಂಶುಪಾಲರ ಮೇಲೆ, ಮಂಡಳಿಯು ಶಿಸ್ತು ಕ್ರಮ ಕೈಗೊಳ್ಳುತ್ತದೆ. ಅದೇ ರೀತಿ ನಾಮಿನಲ್‌ರೋಲ್ ಸಲ್ಲಿಸುವಾಗ, ತಪ್ಪು ಮಾಹಿತಿ ನೀಡಿದಾಗ ಮಂಡಳಿ ದಂಡ ವಿಧಿಸುತ್ತದೆ ಹಾಗೂ ಶಿಸ್ತು ಕ್ರಮಕೈಗೊಳ್ಳುತ್ತದೆ. ಅಲ್ಲದೇ ಪರೀಕ್ಷಾ ಸಮಯದಲ್ಲಿ ಪ್ರಶಿಕ್ಷಣಾರ್ಥಿ, ಮೇಲ್ವಿಚಾರಕರು, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಎಸಗುವ ತಪ್ಪುಗಳಿಗೆ ಮಂಡಳಿ ದಂಡ ವಿಧಿಸುತ್ತದೆ ಮತ್ತು ಶಿಸ್ತುಕ್ರಮಕೈಗೊಳ್ಳುತ್ತದೆ. ಪರೀಕ್ಷಾ ಕಾರ್ಯವಾದ ನಂತರ ಮೌಲ್ಯಮಾಪನ ಸಮಯದಲ್ಲಿ ಗಮನಕ್ಕೆ ಬರುವ ಕೆಲವೊಂದು ಲೋಪದೋಷಗಳು, ತಪ್ಪುಗಳಿಗೆ ಆಯಾ ಪರೀಕ್ಷಾ ಮುಖ್ಯ ಅಧೀಕ್ಷಕರು, ಮೇಲ್ವಿಚಾರಕರಿಗೆ ಮಂಡಳಿ ದಂಡ ವಿಧಿಸುತ್ತದೆ ಮತ್ತು ಶಿಸ್ತುಕ್ರಮ ಕೈಗೊಳ್ಳುತ್ತದೆ. ಯಾವ ಯಾವ ತಪ್ಪಿಗೆ ಯಾವ ರೀತಿ ದಂಡ ಮತ್ತು ಶುಲ್ಕ ಎಂಬುದರ ಸಮಗ್ರ ವಿವರಣೆ.
- **ಮೌಲ್ಯಮಾಪನ ಪ್ರಕ್ರಿಯೆ:–** ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಡಿ.ಇಡಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಉಪನ್ಯಾಸಕರ ವಿವರಗಳನ್ನು ಮಂಡಳಿಯು ನೀಡುವ ನಮೂನೆಯಲ್ಲಿ ಸಂಸ್ಥೆಯ ಪ್ರಾಂಶುಪಾಲರು, ಭರ್ತಿ ಮಾಡಿ ಭಾವಚಿತ್ರ ಅಂಟಿಸಿ ದೃಢೀಕರಿಸಿ ಆಯಾ ಡಯಟ್ ಪ್ರಾಂಶುಪಾಲರಿಗೆ ಕಳುಹಿಸಬೇಕು. ಸಂಸ್ಥೆಯ

ಪ್ರಾಂಶುಪಾಲರು ಉಪನ್ಯಾಸಕರ ಬಗ್ಗೆ ನೀಡಿರುವ ಮಾಹಿತಿಯು ಸರಿಯಾಗಿರುವುದನ್ನು ದಾಖಲೆಗಳೊಂದಿಗೆ ಪರಿಶೀಲಿಸಿ, ನೀಡಿರುವ ಮಾಹಿತಿಯು ಸರಿಯಿದೆಯೆಂದು ಖಾತ್ರಿಪಡಿಸಿಕೊಂಡು, ನಮೂನೆಗಳನ್ನು ಡಯಟ್ ಪ್ರಾಂಶುಪಾಲರು ಮೇಲು ಸಹಿ ಮಾಡಿ ಆಯಾ ಜಿಲ್ಲೆಯ ಕ್ರೋಢೀಕೃತ ಮಾಹಿತಿಯನ್ನು ಮಂಡಳಿಗೆ ಕಳುಹಿಸಬೇಕಾಗಿದೆ.

- ಡಯಟ್ ಪ್ರಾಂಶುಪಾಲರಿಂದ ಸಲ್ಲಿಸುವ ಕ್ರೋಢೀಕೃತ ನಮೂನೆಗಳನ್ನು ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಅವುಗಳನ್ನು ಗಣಕೀಕರಿಸಲಾಗುತ್ತದೆ. ಸೇವಾ ಜೇಷ್ಠತೆಯಾನುಸಾರ, ಉಪಮೌಲ್ಯಮಾಪಕರನ್ನು ಮತ್ತು ಮೌಲ್ಯಮಾಪಕರನ್ನು ಮಂಡಳಿಯು ಪ್ರಶಿಕ್ಷಣಾರ್ಥಿಗಳ ಸಂಖ್ಯೆಗನುಗುಣವಾಗಿ ನೇಮಿಸಿ ಆದೇಶಿಸುತ್ತದೆ. ಮೌಲ್ಯಮಾಪನಕಾರ್ಯಕ್ಕೆ ನೇಮಕಗೊಂಡ ಉಪನ್ಯಾಸಕರು ಕಡ್ಡಾಯವಾಗಿ ಮೌಲ್ಯಮಾಪನ ಕೇಂದ್ರಕ್ಕೆ ಹಾಜರಾಗಬೇಕಾಗಿದೆ. ಗೈರು ಹಾಜರಾದಲ್ಲಿ ಈ ಕಛೇರಿ ಸುತ್ತೋಲೆ ಸಂಖ್ಯೆ:ಎ7.ಪ.ಮೌ.ಮಾ.ಕ/36/2012-13; ದಿನಾಂಕ:24.12.2012ರನ್ವಯ ಕೆ.ಸಿ.ಎಸ್.ಆರ್(ಸಿಸಿಎ) 1957ರ ನಿಯಮಗಳನ್ವಯ ಶಿಸ್ತು ಕ್ರಮಕೈಗೊಳ್ಳಲು ಮಂಡಳಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.
- ಮೌಲ್ಯಮಾಪನವನ್ನು ಮಂಡಳಿಯು ನಿರ್ಧರಿಸುವ ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.
- ಪ್ರಥಮ ಮತ್ತು ದ್ವಿತೀಯ ಡಿ.ಇಡಿಗೆ ನಿಗಧಿಪಡಿಸಲಾಗಿರುವ ಅಂಕಗಳ ವಿವರ **ಅನುಬಂಧ-1ರಲ್ಲಿ ವಿವರಿಸಿದೆ.**
- **ಫಲಿತಾಂಶ ಪ್ರಕಟಣೆ ಮತ್ತು ತೇರ್ಗಡೆ:-**

ಪ್ರಶಿಕ್ಷಣಾರ್ಥಿಗಳು ಪ್ರತಿ ವಿಷಯದಲ್ಲಿ ಲಿಖಿತ ಬಾಹ್ಯ ಪರೀಕ್ಷೆಯಲ್ಲಿ, ಆಂತರಿಕ ಪರೀಕ್ಷೆಗಳಲ್ಲಿ ಮತ್ತು ಬೋಧನಾ ಅಭ್ಯಾಸದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಬೇಕಾದಲ್ಲಿ **ಪ್ರತಿಯೊಂದು ಬಾಹ್ಯ, ಆಂತರಿಕ ಹಾಗೂ ಬೋಧನಾ ಅಭ್ಯಾಸದ ವಿಷಯದಲ್ಲಿ ಪ್ರತ್ಯೇಕವಾಗಿ ಶೇ.50 ಅಂಕಗಳನ್ನು ಪಡೆದಿರಬೇಕು.ಒಟ್ಟಾರೆ ಅಂಕಗಳು ಸಹ ಕನಿಷ್ಠ ಶೇ.50 ಆಗಿರಬೇಕು.**

ಪ್ರಥಮ ವರ್ಷದಲ್ಲಿ ಅನುತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳು, ಅದೇ ತರಗತಿಯಲ್ಲಿ ಉಳಿಯಬೇಕಾಗಿಲ್ಲ, ಅಂತಹ ಪ್ರಶಿಕ್ಷಣಾರ್ಥಿಗಳು ದ್ವಿತೀಯ ವರ್ಷದ ತರಗತಿಗೆ ಹಾಜರಾಗಿ ಅನುತ್ತೀರ್ಣರಾದ ವಿಷಯಗಳಲ್ಲಿ ಪೂರಕ ಪರೀಕ್ಷೆ ತೆಗೆದುಕೊಳ್ಳಬಹುದು.**ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಆಂತರಿಕ, ಬೋಧನಾ ಅಭ್ಯಾಸದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳಿಗೆ ಪೂರಕ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ**. ಅಂತಹ ಅನುತ್ತೀರ್ಣ ಪ್ರಶಿಕ್ಷಣಾರ್ಥಿಗಳು ಮುಂದಿನ ಸಾಲಿನ ಮುಖ್ಯ ಪರೀಕ್ಷೆಯಲ್ಲಿಯೇ ಆಂತರಿಕ ಮತ್ತು ಬೋಧನಾ ಅಭ್ಯಾಸ ಪರೀಕ್ಷೆ ತೆಗೆದುಕೊಳ್ಳಬೇಕು.ಅಂದರೆ ಆಂತರಿಕ ಮತ್ತು ಬೋಧನಾ ಅಭ್ಯಾಸ ನಿಯೋಜಿತ ಕಾರ್ಯಗಳ ತೇರ್ಗಡೆಗೆ ಪುನಃ ಪ್ರಯತ್ನಿಸಲು ಮುಖ್ಯ ಪರೀಕ್ಷೆಯಲ್ಲಿ ಮಾತ್ರ ಅವಕಾಶವಿರುವುದು.ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಬಾಹ್ಯ, ಆಂತರಿಕ ಮತ್ತು ಬೋಧನಾ ಅಭ್ಯಾಸ ಪರೀಕ್ಷೆಗಳಲ್ಲಿ ಅನುತ್ತೀರ್ಣ ವಿಷಯಗಳಲ್ಲಿ ಮಾತ್ರ ಪ್ರಶಿಕ್ಷಣಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಬೇಕು.

- **ಸಮನ್ವಯ ಸಮಿತಿ ರಚನೆ ಮತ್ತು ಬೋಧನಾ ಅಭ್ಯಾಸದ ಬಗ್ಗೆ:-** ಆಂತರಿಕ ವಿಷಯಕ್ಕೆ ಸಂಬಂಧಿಸಿದಂತೆ, ಸಮನ್ವಯ ಸಮಿತಿಯ ರಚನೆ ಮತ್ತು ಪರೀಕ್ಷೆಯ ವಿಧಾನವನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರು ಹೊರಡಿಸಿರುವ ಮಾರ್ಗಸೂಚಿಯಂತೆ, ಆಯಾ ಡಯಟ್ ಪ್ರಾಂಶುಪಾಲರು ಕ್ರಮವಹಿಸುವುದು.
- **ಬೋಧನಾ ಅಭ್ಯಾಸ ಪರೀಕ್ಷೆಗೆ ಸಂಬಂಧಿಸಿದಂತೆ,** ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರು ಹೊರಡಿಸಿರುವ ಮಾರ್ಗಸೂಚಿಯಂತೆ, ಆಯಾ ಡಯಟ್ ಪ್ರಾಂಶುಪಾಲರು ಕ್ರಮವಹಿಸುವುದು.

- **ಹೊಸ ಪಠ್ಯವಸ್ತುವಿನಂತೆ, ಆಂತರಿಕ ಪರೀಕ್ಷೆಗಳಿಗೆ ಗ್ರೇಡ್‌ಗಳನ್ನು ನೀಡುತ್ತಿಲ್ಲ. ಅಂಕಗಳನ್ನು ನೀಡಲಾಗುತ್ತದೆ.**

ಪ್ರಥಮ ಡಿ.ಇಡಿ ಮತ್ತು ದ್ವಿತೀಯ ಡಿ.ಇಡಿ ಪರೀಕ್ಷಾ ಫಲಿತಾಂಶಗಳಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.ಅಂಕಪಟ್ಟಿಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.

ಪ್ರಥಮ ಡಿ.ಇಡಿ ಫಲಿತಾಂಶದಲ್ಲಿ ದರ್ಜೆ ಪ್ರಕಟಿಸಲಾಗುವುದಿಲ್ಲ. ಉತ್ತೀರ್ಣ(Pass) ಅಥವಾ ಅನುತ್ತೀರ್ಣ(Fail) ಎಂದು ಫಲಿತಾಂಶ ಪ್ರಕಟಿಸಲಾಗುವುದು.

ದ್ವಿತೀಯ ಡಿ.ಇಡಿ ಫಲಿತಾಂಶದಲ್ಲಿ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ಎರಡು ವರ್ಷಗಳ ಒಟ್ಟು ಅಂಕಗಳ ಆಧಾರದ ಮೇಲೆ ದರ್ಜೆ ನೀಡಲಾಗುವುದು.

ಒಟ್ಟು ಪರೀಕ್ಷೆಗಳಲ್ಲಿ ಪ್ರಶಿಕ್ಷಣಾರ್ಥಿ ಪಡೆದ ದರ್ಜೆಯನ್ನು ನಿರ್ಧರಿಸಲು ಪ್ರಥಮ ಮತ್ತು ದ್ವಿತೀಯ ವರ್ಷದ ಒಟ್ಟು ಅಂಕಗಳನ್ನು ಪರಿಗಣಿಸಲಾಗುವುದು.ದರ್ಜೆಯ ನಿರ್ಧಾರಕ್ಕೆ ನಿಗಧಿ ಪಡಿಸಲಾದ ಶೇಕಡವಾರು ಅಂಕಗಳು ಈ ಕೆಳಕಂಡಂತಿದೆ.

1.**ವಿಶಿಷ್ಠ ದರ್ಜೆ (Distinction)** - ಶೇಕಡ 80 ಮತ್ತು ಅದಕ್ಕಿಂತ ಮೇಲ್ಪಟ್ಟು.

2.**ಪ್ರಥಮ ದರ್ಜೆ (First)** - ಶೇಕಡ 70 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 80ರೊಳಗೆ.

3.**ದ್ವಿತೀಯ ದರ್ಜೆ (Second)** -ಶೇಕಡ 60 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 70ರೊಳಗೆ.

4.**ಉತ್ತೀರ್ಣ ದರ್ಜೆ (Pass)** -ಶೇಕಡ 50 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 60ರೊಳಗೆ

**ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಎರಡು ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾದವರಿಗೆ ಮಾತ್ರ ದರ್ಜೆ ನೀಡಲಾಗುವುದು.**ದ್ವಿತೀಯ ಡಿ.ಇಡಿ ಫಲಿತಾಂಶ ಪ್ರಕಟಿಸುವ ವೇಳೆಗೆ ಪ್ರಥಮ ಡಿ.ಇಡಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ದ್ವಿತೀಯ ಡಿ.ಇಡಿ ಫಲಿತಾಂಶದಲ್ಲಿ ದರ್ಜೆ ನೀಡಲಾಗುವುದು. ಇಲ್ಲವಾದಲ್ಲಿ ದ್ವಿತೀಯ ಡಿ.ಇಡಿ ಫಲಿತಾಂಶದಲ್ಲಿ ಪ್ರಥಮ ವರ್ಷದಲ್ಲಿ ಅನುತ್ತೀರ್ಣ First year not cleared (FNC) ಎಂದು ಫಲಿತಾಂಶ ಪ್ರಕಟಿಸಲಾಗುವುದು. ಪ್ರಥಮ ಡಿ.ಇಡಿ ತೇರ್ಗಡೆಹೊಂದಿದ ನಂತರ ದ್ವಿತೀಯ ಡಿ.ಇಡಿ ಪರಿಷ್ಕೃತ ಫಲಿತಾಂಶ ಪ್ರಕಟಿಸಲಾಗುವುದು.

**ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಬಾಹ್ಯ ಪರೀಕ್ಷೆಗಳಲ್ಲಿ ಮಾತ್ರ ಅನುತ್ತೀರ್ಣರಾದವರಿಗೆ ಪೂರಕಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.**

ಡಿ.ಇಡಿ ಕೋರ್ಸಿನ ಪ್ರಮಾಣ ಪತ್ರವನ್ನು ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಂತರವೇ ನೀಡಲಾಗುವುದು. ಡಿ.ಇಡಿ ಕೋರ್ಸಿನ ಪ್ರಮಾಣ ಪತ್ರ ಪ್ರಶಿಕ್ಷಣಾರ್ಥಿಯು ಪ್ರಥಮ ಡಿ.ಇಡಿ ಮತ್ತು ದ್ವಿತೀಯ ಡಿ.ಇಡಿ ಪರೀಕ್ಷೆ ಪೂರ್ಣಗೊಳಿಸಿರುವಿಕೆಯನ್ನು ಸೂಚಿಸುವುದರ ಜೊತೆಗೆ ಪ್ರಶಿಕ್ಷಣಾರ್ಥಿಯು ತೇರ್ಗಡೆಯಾದ ದರ್ಜೆಯನ್ನು ಸೂಚಿಸುವುದು.**ಡಿ.ಇಡಿ ಕೋರ್ಸಿನ ಪ್ರಮಾಣ ಪತ್ರವಿಲ್ಲದಿದ್ದರೆ, ಕೆಲಸಕ್ಕೆ ಅರ್ಜಿ ಹಾಕುವ ಸಮಯದಲ್ಲಿ ಡಿ.ಇಡಿ ಕೋರ್ಸ್ ಅಸಂಪೂರ್ಣವೆಂದು ಪರಿಗಣಿಸುವುದು.**

ಕರ್ನಾಟಕ ಪ್ರಾಥಮಿಕ ಶಿಕ್ಷಕ ಶಿಕ್ಷಣ ಪಠ್ಯಕ್ರಮ 2012–ಡಿಪ್ಲೊಮಾ ಇನ್ ಎಜುಕೇಷನ್ ಡಿ.ಎಡ್ ಅನುಸಾರ ಅನುತ್ತೀರ್ಣ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪ್ರಶಿಕ್ಷಣಾರ್ಥಿಗಳು, ಪ್ರಶಿಕ್ಷಣಾರ್ಥಿಯು **ದ್ವಿತೀಯ ಡಿ.ಇಡಿ ವ್ಯಾಸಂಗವನ್ನು ಪೂರ್ಣಗೊಳಿಸಬೇಕಾದ ವರ್ಷದಿಂದ ಸತತ ಮೂರು ವರ್ಷದ ಅವಧಿಯೊಳಗೆ ಉತ್ತೀರ್ಣರಾಗಿರಬೇಕು.ತದನಂತರ ಡಿ.ಇಡಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

**<u>ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಬಗ್ಗೆ:-</u>**

- ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ **ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾದವರಿಗೆ ಮುಂದಿನ ಮುಖ್ಯ ಪರೀಕ್ಷೆಯಲ್ಲಿ ಮಾತ್ರ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅವಕಾಶವಿದೆ.** ಕೇವಲ ಒಂದು ಅವಕಾಶವನ್ನು ನೀಡಲಾಗುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸುವ ಪ್ರಶಿಕ್ಷಣಾರ್ಥಿಗಳು ಅಂಕಪಟ್ಟಿಗಳನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅನುಮತಿಗಾಗಿ ಸಂಸ್ಥೆಯ ಮುಖಾಂತರ ಅರ್ಜಿ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಕಳುಹಿಸುವುದು. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸುವ ಪ್ರಶಿಕ್ಷಣಾರ್ಥಿಗಳು ಎಲ್ಲಾ ಬಾಹ್ಯ ಪರೀಕ್ಷೆಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು.
- ಆಂತರಿಕ ಮತ್ತು ಬೋಧನಾ ಅಭ್ಯಾಸ ಪರೀಕ್ಷೆಗಳಿಗೆ **ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅವಕಾಶವಿಲ್ಲ. ಹಿಂದಿನ ಸಾಲಿನ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.**
- ಪುನರಾವರ್ತಿತ ಪ್ರಶಿಕ್ಷಣಾರ್ಥಿಗಳಿಗೆ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅವಕಾಶವಿಲ್ಲ.
- ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಮೊದಲು ಪ್ರಶಿಕ್ಷಣಾರ್ಥಿಯು ಯಾವ ಮಾಧ್ಯಮದಲ್ಲಿ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಿರುತ್ತಾರೋ ಅದೇ ಮಾಧ್ಯಮದಲ್ಲಿಯೇ ಪರೀಕ್ಷೆ ಬರೆಯಬೇಕು. ಮಾಧ್ಯಮ ಬದಲಾವಣೆಗೆ ಅವಕಾಶವಿಲ್ಲ.
- ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷೆ ತೆಗೆದುಕೊಂಡ ಪ್ರಶಿಕ್ಷಣಾರ್ಥಿಗಳು ಹಿಂದಿನ ಪರೀಕ್ಷೆಯಲ್ಲಿ ಪಡೆದಿರುವ ಒಟ್ಟು ಅಂಕಗಳಿಗಿಂತ ಕಡಿಮೆ ಅಂಕ ಪಡೆದಲ್ಲಿ ಹಿಂದಿನ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನೇ ಗಣನೆಗೆ ತೆಗೆದುಕೊಳ್ಳಲಾಗುವುದು. **<u>ವಿಷಯವಾರು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ</u>**.
- ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಪ್ರಶಿಕ್ಷಣಾರ್ಥಿಗಳು ಆಯಾ ಸಾಲಿನಲ್ಲಿ ಜಾರಿಯಲ್ಲಿರುವ ಡಿ.ಇಡಿ ಪಠ್ಯವಸ್ತು ಮತ್ತು ಪಠ್ಯಕ್ರಮದಲ್ಲಿಯೇ ಪರೀಕ್ಷೆ ತೆಗೆದುಕೊಳ್ಳಬೇಕು.

➢ **ಫಲಿತಾಂಶ ಪ್ರಕಟಣೆಯಾದ ನಂತರ ಛಾಯಾ ಪ್ರತಿ, ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಮಂಡಳಿ ಅವಕಾಶ ಕಲ್ಪಿಸಿದೆ.**

➢ **ಅಂಕಪಟ್ಟಿ ವಿತರಣೆ:-** ಪ್ರಥಮ ಡಿ.ಇಡಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳಿಗೆ ಅಂಕಪಟ್ಟಿಯನ್ನು ವಿತರಿಸಲಾಗುವುದು. ದ್ವಿತೀಯ ಡಿ.ಇಡಿಯಲ್ಲಿ ಉತ್ತೀರ್ಣರಾದ ಪ್ರಶಿಕ್ಷಣಾರ್ಥಿಗಳಿಗೆ, ಪ್ರಥಮ ಡಿ.ಇಡಿ ಉತ್ತೀರ್ಣ ಹೊಂದಿದ್ದಲ್ಲಿ ಮಾತ್ರ ದ್ವಿತೀಯ ಡಿ.ಇಡಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಡಯಟ್ ಪ್ರಾಂಶುಪಾಲರ ಮುಖಾಂತರ ವಿತರಿಸಲಾಗುತ್ತದೆ. ಎರಡೂ ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದಲ್ಲಿ ಮಾತ್ರ ಡಿ.ಇಡಿ ಕೋರ್ಸಿನಲ್ಲಿ ವಿದ್ಯಾರ್ಥಿ ತೇರ್ಗಡೆ ಹೊಂದಿದಂತಾಗುತ್ತದೆ. ಅಂತಹ ಪ್ರಶಿಕ್ಷಣಾರ್ಥಿಗಳಿಗೆ ಅಂಕಪಟ್ಟಿ, ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತದೆ. ಅನುತ್ತೀರ್ಣ ಪ್ರಶಿಕ್ಷಣಾರ್ಥಿಗಳಿಗೆ ಎಂ.ಎಸ್.ಎ(Marks Statement Cum-Application) ಕಳುಹಿಸಲಾಗುವುದು. ಮುಂದೆ ಪ್ರಶಿಕ್ಷಣಾರ್ಥಿಯು ಪರೀಕ್ಷೆ ತೆಗೆದುಕೊಂಡಾಗ ಎಂ.ಎಸ್.ಎಯಲ್ಲಿ ಭರ್ತಿ ಮಾಡಿ ಪರೀಕ್ಷಾ ಅರ್ಜಿ ಸಲ್ಲಿಸಬೇಕಾಗುತ್ತದೆ.

## ಅನುಬಂಧ-1

- ಪ್ರಾಥಮಿಕ ಶಿಕ್ಷಕ ಶಿಕ್ಷಣ ಶಿಕ್ಷಣದಲ್ಲಿ ಡಿಪ್ಲೊಮಾ(ಡಿ.ಇಡಿ) 2012ರ ಎರಡು ವರ್ಷದ ಅವಧಿಯ ಡಿ.ಇಡಿ ಕೋರ್ಸ್ 2012ರಿಂದ ಜಾರಿಗೊಂಡಿದೆ.

### ಪ್ರಥಮ ಡಿ.ಇಡಿ:I D.Ed

| ಕ್ರಮ ಸಂಖ್ಯೆS L.NO | ವಿವರಗಳು Details | ಆಂತರಿಕ ಪರೀಕ್ಷೆಯ ಗರಿಷ್ಠ ಅಂಕಗಳು Max. Marks | ಆಂತರಿಕ ಪರೀಕ್ಷೆಯ ಕನಿಷ್ಠ ಅಂಕಗಳು Minimum Marks | ಬಾಹ್ಯ ಪರೀಕ್ಷೆಯ ಗರಿಷ್ಠ ಅಂಕಗಳು Max. Marks | ಬಾಹ್ಯ ಪರೀಕ್ಷೆಯ ಕನಿಷ್ಠ ಅಂಕಗಳು Minimum Marks |
|---|---|---|---|---|---|
| 1.1 | ಶಿಕ್ಷಣ: ಮೂಲ ಪರಿಕಲ್ಪನೆಗಳ ಪರಿಚಯ<br>**Education Introduction to Basic Concepts** | 40 | 20 | 60 | 30 |
| 1.2.1 | ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ)<br>**Faciliating Learning (LPS)-First Language**<br>ಕನ್ನಡ- **Kannada**<br>ಹಿಂದಿ-**Hindi**<br>ಉರ್ದು -**Urdu**<br>ಮರಾಠಿ -**Marati**<br>ತಮಿಳು-**Tamil**<br>ತೆಲುಗು-**Telugu** | 40 | 20 | 60 | 30 |
| 1.2.2 | ಕಲಿಕೆಯನ್ನು ಅನುಕೂಲಿಸುವುದು(ಕಿ.ಪ್ರಾ.ಶಾ) –ಗಣಿತ<br>**Faciliating Learning (LPS) -Mathematics** | 40 | 20 | 60 | 30 |
| 1.2.3 | ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ)–ಪರಿಸರ ಅಧ್ಯಯನ<br>**Faciliating Learning (LPS) –Environmental Studies** | 40 | 20 | 60 | 30 |
| 1.3 | ಇಂಗ್ಲೀಷಿನಲ್ಲಿ ಸಂವಹನಾ ಸಾಮರ್ಥ್ಯ<br>**Communication Skills in English** | 20 | 10 | 30 | 15 |
| 1.4 | ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ<br>**Educational Assessment and Evaluation** | 20 | 10 | 30 | 15 |
| 1.5.1 | ಶಿಕ್ಷಕ ಅಭಿವೃದ್ಧಿ ಅಧ್ಯಯನಗಳು<br>**Teacher Development Studies** | | | | |
| 15.1 | ಶಿಕ್ಷಣದಲ್ಲಿ ಕಲೆ<br>**Arts in Education** | 25 | 12.5 | – | – |
| 1.5.2 | ಚಿಂತನಾಶೀಲ ಆಚರಣೆಗಳು<br>**Reflective Practices** | 25 | 12.5 | – | – |
| 1.6 | ದೈಹಿಕ ಶಿಕ್ಷಣ ಮತ್ತು ಆಟಗಳು<br>**Physical Education & Games** | 50 | 25 | – | – |
| 1.7 | ಬೋಧನಾ ಅಭ್ಯಾಸ ಮತ್ತು ಇಂಟರ್ನ್ ಶಿಪ್<br>**Practice in Teaching & Internship** | | | | |
| 1.7.1 | ಬೋಧನಾ ಅಭ್ಯಾಸ<br>**Practice in Teaching** | – | – | 20 | 10 |
| | 1.7.1 a. ಪ್ರಥಮ ಭಾಷೆ<br>**First Language** | 30 | 15 | 20 | 10 |
| | 1.7.1 b ಗಣಿತ<br>**Mathematics** | 30 | 15 | 20 | 10 |
| | 1.7.1 c ಪರಿಸರ ಅಧ್ಯಯನ<br>**Evironmental Studies** | 30 | 15 | – | – |
| 1.7.2 | ಇಂಟರ್ನ್ ಶಿಪ್<br>**Internship** | 50 | 25 | – | – |
| | ಒಟ್ಟು ಆಂತರಿಕ ಅಂಕಗಳು<br>**Total Internal Marks** | 440 | 220 | 360 | 180 |

## ದ್ವಿತೀಯ ಡಿ.ಇಡಿ : II D.Ed

| ಕ್ರಮ ಸಂಖ್ಯೆ SL.NO | ವಿವರಗಳು Details | ಆಂತರಿಕ ಪರೀಕ್ಷೆಯ ಗರಿಷ್ಠ ಅಂಕಗಳು Max. Marks | ಆಂತರಿಕ ಪರೀಕ್ಷೆಯ ಕನಿಷ್ಠ ಅಂಕಗಳು Minimum Marks | ಬಾಹ್ಯ ಪರೀಕ್ಷೆಯ ಗರಿಷ್ಠ ಅಂಕಗಳು Max. Marks | ಬಾಹ್ಯ ಪರೀಕ್ಷೆಯ ಕನಿಷ್ಠ ಅಂಕಗಳು Minimum Marks |
|---|---|---|---|---|---|
| 2.1 | ರೂಡಿಯಾಗಿ ಶಿಕ್ಷಣ<br>**Education as Practice** | 40 | 20 | 60 | 30 |
| 2.2.1 | ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ) –ಪ್ರಥಮ ಭಾಷೆ<br>**Faciliating Learning (HPS) -First Language**<br>ಕನ್ನಡ– **Kannada**<br>ಹಿಂದಿ-**Hindi**<br>ಉರ್ದು -**Urdu**<br>ಮರಾಠಿ -**Marati**<br>ತಮಿಳು-**Tamil**<br>ತೆಲುಗು-**Telugu** | 40 | 20 | 60 | 30 |
| 2.2.2 | ಕಲಿಕೆಯನ್ನು ಅನುಕೂಲಿಸುವುದು(ಹಿ.ಪ್ರಾ.ಶಾ) –ಇಂಗ್ಲೀಷ್<br>**Faciliating Learning (HPS) -English** | 40 | 20 | 60 | 30 |
| 2.2.3<br>2.2.3a<br>2.2.3b<br>2.2.3c | ಐಚ್ಛಿಕ ವಿಷಯಗಳು (ಯಾವುದಾದರೂ ಒಂದು)<br>ವಿಜ್ಞಾನ– **Science**<br>ಗಣಿತ– **Mathematics**<br>ಸಮಾಜ ವಿಜ್ಞಾನ– **Social Science** | 40 | 20 | 60 | 30 |
| 2.3 | ಆರೋಗ್ಯ ಮತ್ತು ದೈಹಿಕ ಶಿಕ್ಷಣ<br>**Health & Physical Education** | 50 | 25 | – | – |
| 2.4 | ಶಿಕ್ಷಕ ಅಭಿವೃದ್ಧಿ ಅಧ್ಯಯನ<br>**Teacher Development Studies** | | | | |
| 2.4.1 | **ICT** ಮಿಡಿಯೇಷನ್<br>**ICT Mediation** | 25 | 12.5 | – | – |
| 2.4.2 | ಶಾಂತಿಗಾಗಿ ಶಿಕ್ಷಣ<br>**Education for Peace** | 20 | 10 | – | – |
| 2.4.3 | ಕಾರ್ಯ ಮತ್ತು ಶಿಕ್ಷಣ<br>**Work & Education** | 25 | 12.5 | – | – |
| 2.5 | ಕ್ರಿಯಾ ಸಂಶೋಧನೆ<br>**Action Research** | 50 | 25 | – | – |
| 2.6 | ಬೋಧನಾ ಅಭ್ಯಾಸ ಮತ್ತು ಇಂಟರ್ನ್ ಶಿಪ್<br>**Practice in Teaching & Internship** | | | | |
| 2.6.1 | 2.6.1 a. ಪ್ರಥಮ ಭಾಷೆ<br>First Language | 30 | 15 | 30 | 15 |
| | 2.6.1 b ಇಂಗ್ಲೀಷ್<br>English | 30 | 15 | 30 | 15 |
| | 2.6.1 c ಯಾವುದಾದರೊಂದು ಐಚ್ಛಿಕ ವಿಷಯ<br>(ವಿಜ್ಞಾನ, ಗಣಿತ, ಸಮಾಜ ವಿಜ್ಞಾನ)<br>Optional(Any One)<br>(Science, Mathematics, Social Science) | 30 | 15 | 30 | 15 |
| 2.6.2 | ಬೋಧನಾ ಅಭ್ಯಾಸ<br>Internship | 50 | 25 | – | – |
| | ಒಟ್ಟು ಅಂಕಗಳು<br>**Total Marks** | **470** | **235** | **330** | **165** |